ಎಂ ವಿ ಸಿ ಸಂಖ್ಯೆ 646/2024

ಆರ್ ಡಬ್ಲ್ಯೂ-1

**(ದಿನಾಂಕ 06.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಎದುರುದಾರರ ಪರ ಶ್ರೀ ಪಿ ಕೆ ವಕೀಲರಿಂದಃ-**

ನಾನು ಮಧ್ಯಾಹ್ನ ಕೂಡ್ಲಿಗಿ ಕಡೆಗೆ ಹೋಗುತ್ತಿದ್ದೆ. ನಾನೇ ಬಸ್ಸನ್ನು ಅಜಾಗರೂಕತೆಯಿಂದ ಚಲಾಯಿಸಿ ಓಮಿನಿಗೆ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಪಘಾತದ ಕಾರಣ ಅರ್ಜಿದಾರರಿಗೆ ತಲೆಗೆ ಎಡಗಡೆ ಹುಬ್ಬಿಗೆ ಬಲ ತೊಡೆಗೆ ಬಲ ಎದೆಗೆ ಸೊಂಟಕ್ಕೆ ತೀವ್ರ ಗಾಯ ಮತ್ತು ಮೂಳೆ ಮುರಿತ ಆಗಿರುತ್ತದೆ ಎಂದರೆ ಸರಿಯಲ್ಲ. ನಂತರ ಅವರನ್ನು ಆಸ್ಪತ್ರೆಗೆ ಕಳುಹಿಸಲಾಗಿರುತ್ತದೆ ಎಂದರೆ ನಾನೇ ಕಳುಹಿಸಿರುತ್ತೇನೆ. ಅರ್ಜಿದಾರರು ಆರೈಕೆ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದರು ಎಂದರೆ ಸರಿಯಲ್ಲ. ಪೋಲೀಸರು ನನ್ನ ವಿರುದ್ಧ ಪ್ರಥಮ ವರ್ತಮಾನ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ. ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಆದರೆ ನನ್ನ ತಪ್ಪು ಇಲ್ಲಾ. ನಾನು ದೋಷಾರೋಪಣ ಪಟ್ಟಿಯನ್ನು ಎಲ್ಲಿಯು ಪ್ರಶ್ನೆ ಮಾಡಿರುವುದಿಲ್ಲಾ ಎಂದರೆ ಸರಿ. ನನಗೆ ಡಿ ಎಲ್ ಇದೆ. ಬಸ್ಸಗೆ ವಿಮೇ ಇದೆ ಎಂದರೆ ಸರಿ. ನನ್ನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಹೀಗಾಗಿ ಪರಿಹಾರ ಕೊಡಲು ನಾನೇ ಬಾದ್ಯಸ್ಥ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.